# ಮೊಲ ಮತ್ತು ನರಿ

ಒಮ್ಮೆ ನರಿಯ ಪುಟಾಣಿ ಮರಿಯೊಂದು ಹೇಗೋ ತನ್ನ ಕುಟುಂಬದವರಿಂದ ಬೇರೆಯಾಗಿಬಿಟ್ಟಿತು. ಕತ್ತಲಾಗುತ್ತಾ ಬಂದ ಹಾಗೆ ಹೆದರಿಕೆಯಾಗಿ ನಡುಗುತ್ತಿದ್ದ ಮರಿಗೆ ಮೊಲದ ಸಂಸಾರವೊಂದು ಸಿಕ್ಕಿತು. 'ನಾನೂ ನಿಮ್ಮ ಜೊತೆ ಬರುತ್ತೇನೆ. ಕತ್ತಲೆಯಿಂದ ನನಗೆ ಭಯವಾಗುತ್ತಿದೆ' ಎಂದು ಬೇಡಿಕೊಂಡಿತು. ಅದನ್ನು ನೋಡಿ ಮೊಲದ ಮಕ್ಕಳು 'ಬಾ, ಬಾ' ಎಂದವು. ಅಮ್ಮ-ಅಪ್ಪ ಮೊಲಗಳು ಬೇಡವೆಂದರೂ ಬಿಡದೆ ಮೊಲದ ಮಕ್ಕಳು ಹಠ ಮಾಡಿದವು. ಮೊಲ, 'ನೀನು ನಾಳೆಯೇ ನಿನ್ನ ಮನೆಗೆ ಹೊರಟು ಹೋಗುವುದಾದರೆ ಕರೆದುಕೊಂಡು ಹೋಗುತ್ತೇವೆ' ಎಂದು ನರಿಯ ಮರಿಗೆ ಹೇಳಿತು. ಮರಿ ಒಪ್ಪಿಕೊಂಡಿತು.

ಮಾರನೆಯ ದಿನ ಮೊಲದ ಮಕ್ಕಳೊಂದಿಗೆ ಸೇರಿಕೊಂಡು ಮರಿ ಆಟವಾಡುತ್ತಿತ್ತು. ಹೊಸ ಜೊತೆಗಾರನೊಬ್ಬ ಸಿಕ್ಕ ಎಂದು ಮೊಲದ ಮಕ್ಕಳು ಖುಷಿಯಿಂದಿದ್ದವು. ಅಮ್ಮ ಮೊಲ 'ನೀನಿನ್ನು ಹೊರಡು' ಎಂದು ಮರಿಗೆ ಹೇಳಿದಾಗ, ಮೊಲದ ಮಕ್ಕಳು 'ಅದು ಇಲ್ಲಿಯೇ ನಮ್ಮ ಜೊತೆಯಲ್ಲಿಯೇ ಇರಲಿ, ಇಲ್ಲವೆಂದರೆ ನಾವೂ ಅದರ ಜೊತೆಯಲ್ಲಿಯೇ ಹೋಗುತ್ತೇವೆ' ಎಂದು ಹಠ ಮಾಡಿದವು. ಅಪ್ಪ-ಅಮ್ಮ ಮೊಲಗಳಿಗೆ ಭಯವಾಯಿತು. ಈ ಮರಿ ಮುಂದೊಂದು ದಿನ ನಮ್ಮ ಮಕ್ಕಳನ್ನು ಕೊಂದು ತಿನ್ನುತ್ತದೆ ಎಂದು ಅವುಗಳಿಗೆ ಗೊತ್ತಿತ್ತು. ಆದ್ದರಿಂದ ಏನಾದರೂ ಮಾಡಬೇಕೆಂದು ಯೋಚಿಸಿ, ಪರಿಹಾರಕ್ಕಾಗಿ ಕರಡಿಯಣ್ಣನ ಬಳಿಗೆ ಓಡಿದವು.

ಎಲ್ಲ ಕೇಳಿಸಿಕೊಂಡ ಕರಡಿಯಣ್ಣ, ಸ್ಥಳಕ್ಕೆ ಬಂದು ಮೊಲದ ಮಕ್ಕಳನ್ನು 'ನೀವು ಮಾತ್ರ ಇಲ್ಲಿ ಬನ್ನಿ' ಎಂದು ಕರೆಯಿತು. ಹತ್ತಿರ ಬಂದ ಮಕ್ಕಳ ಕಿವಿಯಲ್ಲಿ ಏನೋ ಹೇಳಿದಂತೆ ಮಾಡಿ, 'ಏನಿಲ್ಲ ಹೋಗಿ, ನರಿಯ ಮರಿಯ ಜೊತೆ ಆಟವಾಡಿಕೊಳ್ಳಿ' ಎಂದಿತು.

ಮೊಲದ ಮಕ್ಕಳು ಮರಳಿ ಬಂದಾಗ, ನರಿಯ ಮರಿ 'ಕರಡಿಯಣ್ಣ ಏನು ಹೇಳಿತು?' ಎಂದು ಕೇಳಿತು. ಮೊಲದ ಮಕ್ಕಳು 'ಏನೂ ಹೇಳಲಿಲ್ಲ' ಎಂದವು. ಅದನ್ನು ನಂಬದ ಮರಿ, 'ಕರಡಿ ಏನೋ ಹೇಳಿದೆ. ನನಗೆ ಸುಳ್ಳು ಹೇಳುತ್ತೀರಾ?' ಎಂದು ಹಲ್ಲು ಕಿರಿದು ಮೊಲದ ಮಕ್ಕಳನ್ನು ಗದರಿಸಿತು. ಮರಿಯ ಹೊಸ ಅವತಾರವನ್ನು ಕಂಡ ಮಕ್ಕಳು ಭಯದಿಂದ ಓಡಿ ಅಪ್ಪ-ಅಮ್ಮನ ಕಡೆ ಬಂದವು. ಕರಡಿ ಮರಿಯನ್ನು ಗುರಾಯಿಸಿ ನೋಡಿ 'ನೀನಿನ್ನು ಹೊರಡು' ಎಂದಿತು. ನರಿಯ ಮರಿ ತನ್ನ ಅಮ್ಮನನ್ನು ಹುಡುಕಿಕೊಂಡು ಹೊರಟಿತು. ಅಪ್ಪ-ಅಮ್ಮ ಮೊಲಗಳು ಸಮಾಧಾನದ ನಿಟ್ಟುಸಿರು ಬಿಟ್ಟವು. ●

